**ಮರು ಪ್ರಮಾಣೀಕರಿಸಲಾದ ದಿನಾಂಕ : 24.02.2026.**

**<u>ವಾಟೀ ಸವಾಲು : ಪ್ರತಿವಾದಿ ಪರ ಶ್ರೀ. H.L ವಕೀಲರಿಂದ</u> :-**

ನನ್ನ ಆಸ್ತಿಗಳಾದ ಐಟಂ ನಂಬರ್‌ಃ 1 ರಿಂದ 3 ನ್ನು ಎಂದಿಗೂ ನಾನು ಅಳತೆ ಮಾಡಿಸಿರುವುದಿಲ್ಲ. ನಿಪಿ-4 ರಂತೆ ದಾವಾ ಆಸ್ತಿಗಳನ್ನು ಅಳತೆಗೆ ಒಳಪಡಿಸಿದ ಚೆಕ್ಕು ಬಂದಿಗಳೆಂದೂ ನಮೂದಾಗಿರುತ್ತದೆ ಎಂದರೆ ಸರಿ. ನಮ್ಮ ಊರಿನಲ್ಲಿ ನನ್ನದು ಹೆಂಚಿನ ಮನೆಯಾಗಿರುತ್ತದೆ. ನಾನು ಈ

ಹಿಂದೆ ಹೇಳಿರುವ ಹಾಗೇ ಹೆಂಚಿನ ಮನೆಯ ಪಕ್ಕದಲ್ಲಿ ಜಮೀನಿದ್ದು ಅದಾದ ಬಳಿಕ ತಂತಿ ಬೇಲಿಯನ್ನು ಹಾಕಿರುತ್ತೇವೆ ಎಂದು ನುಡಿಯುತ್ತಾರೆ. ಅದನ್ನು ಸುಮಾರು 35 ಮೀಟರ್ ವರೆಗೂ ಹಾಕಿರುವುದಾಗಿ ಹೇಳಿರುತ್ತಾರೆ. ಇಂದಿಗೂ ಸಹ ಎಲ್ಲಾ ದಾಖಲಾತಿಗಳು ನಿಮ್ಮ ಚಿಕ್ಕಪ್ಪನವರ ಹೆಸರಿನಲ್ಲಿದ್ದು ಈ ದಾವೆಯನ್ನು ಹೂಡಲು ಅವೇನಾದರೂ ನಿಮಗೆ GPA ಯನ್ನು ನೀಡಿದ್ದರ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನು ನನಗೆ ಸೇರಿದ ಕಾರಣ ನಾನು ಈ ದಾವೆಯನ್ನು ಹಾಕಿರುತ್ತೇನೆ. ಸಾಮಾನ್ಯವಾಗಿ ಯಾರ ಹೆಸರಿನಲ್ಲಿ ದಾಖಲಾತಿ ಇದೆಯೋ ಆ ವ್ಯಕ್ತಿ ಈಗ ಜೀವಂತವಿದ್ದಲ್ಲಿ ಅವರನ್ನು ಪಕ್ಷಗಾರರನ್ನಾಗಿ ಸೇರಿಸಿ ದಾವೆಯನ್ನು ಹೂಡಬೇಕು ಎಂದರೆ ಅದರ ಬಗ್ಗೆ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ನನ್ನ ಚಿಕ್ಕಪ್ಪನವರು ಇಂದಿಗೂ ಸಹ ಜೀವಂತವಿದ್ದಾರೆ. ನಿಮ್ಮ ಮನೆಗೆ ಹೊಂದಿಕೊಂಡಂತೆ ಪ್ರತಿವಾದಿಗಳ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಅದನ್ನು ಪಡೆದುಕೊಳ್ಳಬೇಕು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಇದೇ ನ್ಯಾಯಾಲಯದ ಮುಂದೆ ಪ್ರತಿವಾದಿಯ ವಿರುದ್ಧ O.S.No.142/2017 ರಂತೆ ಮತ್ತೊಂದು ಸುಳ್ಳು ದಾವೆಯನ್ನು ಹೂಡಿದ್ದೀರಿ ಎಂದರೆ ಸರಿಯಲ್ಲ. ಅದನ್ನು ಸಹ ಪ್ರತಿವಾದಿಯವರಿಗೆ ಸೇರಿದ ಸ.ನಂ.94/2 ರಲ್ಲಿ 3 ಎಕರೆ 23 ಗುಂಟೆ ವಿಸ್ತೀರ್ಣವನ್ನು ಪಡೆದುಕೊಳ್ಳಬೇಕು ಎಂಬ ಉದ್ದೇಶದಿಂದ ಹೂಡಿರುತ್ತೀರಿ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಮ್ಮ ವಾಸದ ಮನೆಗೆ ಹೊಂದಿಕೊಂಡಂತೆ ವಾಸ ಇಲ್ಲ ಎಂದ ತೋರಿಸುವುದಕ್ಕೆ ನ್ಯಾಯಾಲಯದಿಂದ ಆಯುಕ್ತರನ್ನು ನೇಮಕ ಮಾಡಿದ್ದಲ್ಲಿ ನಮಗೆ ಯಾವುದೇ ಅಭ್ಯಂತರ ಇರುವುದಿಲ್ಲ. ದಾವಾ ಆಸ್ತಿಗಳಿಗೆ ಪ್ರತಿವಾದಿಗಳು ತೊಂದರೆ ಕೊಡಲು ಬಂದಿದ್ದರಿಂದ ನಾನು ಈ ದಾವೆಯನ್ನು ಹೂಡಿರುತ್ತೇನೆ. ನಾನು 60 ರಿಂದ 70 ವರ್ಷಗಳಿಂದ ಸದರಿ ದಾವಾ ಆಸ್ತಿಗಳಲ್ಲಿ ಸ್ವಾಧೀನಾನುಭವದಲ್ಲಿದ್ದು ಅದರ ಸುತ್ತಲೂ ಹಾಕಿರುವ ತಂತಿ ಬೇಲಿಗಳನ್ನು ಕೀಳಲು ಬಂದ ಕಾರಣ ನಾನು ಈ ದಾವೆಯನ್ನು ಹೂಡಿರುತ್ತೇನೆ. ದಾವೆಯನ್ನು ಹೂಡಲು ಸಂಪೂರ್ಣ ಮಾಹಿತಿಯನ್ನು ನಮ್ಮ ವಕೀಲರಿಗೆ ನಾನು ನೀಡಿರುತ್ತೇನೆ. ಈ ದಾವೆಯನ್ನು ಹೂಡಿದ ವಾದಪತ್ರದಲ್ಲಿ ತಂತಿ ಬೇಲಿಯನ್ನು ಹಾಕಿರುತ್ತೇನೆ ಎಂದು ನಮೂದುಪಡಿಸಿದ್ದೀರ ಎಂದು ಕೇಳಿದಾಗ ಸಾಕ್ಷಿಯು ಅದರ ಬಗ್ಗೆ ನನಗೆ ಈಗ ನೆನಪಿಲ್ಲ, ಮರೆತು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ವಾದಪತ್ರದಲ್ಲಿ ಪ್ರತಿವಾದಿಗಳು ತಂತಿ ಬೇಲಿಯನ್ನು ಕಿತ್ತು ಹಾಕಲು ಪ್ರಯತ್ನಪಟ್ಟರು ಎಂಬ ಸಂಗತಿಯನ್ನು ಬರೆಸಿದ್ದೀರಾ ಎಂದು ಕೇಳಿದಾಗ ಸಾಕ್ಷಿಯು ಅವರು ತೊಂದರೆ ಕೊಡಲು ಬಂದಿರುತ್ತಾರೆ ಎಂದು ನಮೂದಿಸಿರುವುದಾಗಿ ನುಡಿಯುತ್ತಾರೆ. ಅವರು ಒಂದು ಕಂಬವನ್ನು ಕಿತ್ತು ಹಾಕಿದ್ದರು. ತಂತಿಯನ್ನು ಕೀಳಲು ಪ್ರಯತ್ನಿಸಿರುತ್ತಾರೆ ಎಂದು

ನುಡಿಯುತ್ತಾರೆ. ಸದರಿ 6 ಅಡಿ ಕಂಬವನ್ನು ಅವರು ಬೀಳಿಸಿರುತ್ತಾರೆ. ಆ ವಿಚಾರವಾಗಿ ನಾನು ಯಾವುದೇ ಭಾವಚಿತ್ರವನ್ನು ತೆಗೆದಿರುವುದಿಲ್ಲ, ಆದರೆ ಪೊಲೀಸರಿಗೆ ದೂರನ್ನು ನೀಡಿರುತ್ತೇನೆ. ಆದರೆ ಪೊಲೀಸರು ಬಂದು ಇಬ್ಬರಿಗೂ ಬುದ್ಧಿವಾದ ಹೇಳಿ ಗಲಾಟೆ ಮಾಡಿಕೊಳ್ಳಬಾರದು ಎಂದು ಬುದ್ಧಿವಾದ ಹೇಳಿ ಹೋಗಿರುತ್ತಾರೆ. ನಾನು ಕೈ ಬರಹದ ಮೂಲಕ ದೂರನ್ನು ಕುರಿತು ಅವರು ಅದನ್ನು ರೆಕಾರ್ಡ್ ಮಾಡಿಕೊಂಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಪೊಲೀಸ್ ನವರು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಪೊಲೀಸ್ ಠಾಣೆಯಲ್ಲಿ ನೀಡಿದಂತಹ ಅರ್ಜಿಯು ಅಲ್ಲೇ ಇರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಆಸ್ತಿಯ ಸ.ನಂ.6/6ಎ ರ ದಕ್ಷಿಣ ದಿಕ್ಕಿನಲ್ಲಿ ಪ್ರತಿವಾದಿಗಳು ಕಂಬವನ್ನು ಇಟ್ಟಿರುತ್ತಾರೆ. ಸಾಕ್ಷಿಯು ಮುಂದುವರೆದು 1ನೇ ಐಟಂ ನ ಸ್ವತ್ತಿಗೆ ತೊಂದರೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಅದನ್ನು ನಮ್ಮ ವಾದಪತ್ರದಲ್ಲಿ ಖಚಿತವಾಗಿ ಹೇಳಿರುವುದಿಲ್ಲ. ನಾನು ಸಮಾಜದಲ್ಲಿ ಪ್ರಭಾವವುಳ್ಳ ವ್ಯಕ್ತಿಯಾದ ಕಾರಣ ಪ್ರತಿವಾದಿಗಳು ಯಾವುದೇ ತೊಂದರೆ ನೀಡದೇ ಇದ್ದರೂ ಅವರ ವಿರುದ್ಧ ಸುಳ್ಳು ದಾವೆಯನ್ನು ಹೂಡಿರುತ್ತೀರಿ ಎಂದರೆ ಸರಿಯಲ್ಲ. ಅವರು ಯಾವ ಕಂಬವನ್ನು ಬೀಳಿಸಿರುವುದಿಲ್ಲ, ಯಾವ ತಂತಿಗಳನ್ನು ತೆಗೆದು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಭಾವಚಿತ್ರಗಳನ್ನು ನಾನೇ ನೋಡಿರುತ್ತೇನೆ. ಒಂದು ವೇಳೆ ಪ್ರತಿವಾದಿಗಳು ಕಂಬವನ್ನು ಬೀಳಿಸಿದ್ದಲ್ಲಿ ಸದರಿ ಭಾವಚಿತ್ರವನ್ನು ಸಹ ತೆಗೆಯುತ್ತಿದ್ದೀರಿ, ಆದರೆ ಅಲ್ಲಿ ಯಾವುದೇ ಕಂಬ ಮುರಿದು ಬಿದ್ದಿರುವ ಭಾವಚಿತ್ರ ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಆಗ ಅಗತ್ಯವಿರುವುದಿಲ್ಲ ಎಂದು ನುಡಿಯುತ್ತಾರೆ. ಆದರೆ ಈ ಮೂರು ಭಾವಚಿತ್ರಗಳನ್ನು ತೋರಿಸುವ ಉದ್ದೇಶದಿಂದ ತೆಗೆದಿರುತ್ತೇನೆ ಎಂದು ನುಡಿಯುತ್ತಾರೆ. ಯಾವುದೇ ಒತ್ತುವರಿ ಆಗಿರುವುದಿಲ್ಲ ಹಾಗೂ ಕಂಬವನ್ನು ಪ್ರತಿವಾದಿಗಳು ಮುರಿದಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಮಗೆ ಮನೆಗೆ ಹೊಂದಿಕೊಂಡಂತೆ ಇದ್ದರೂ ಇಲ್ಲ ಎಂದು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಸಹಿ/-**
**ಅಪರ ಸಿವಿಲ್ ನ್ಯಾಯಾಧೀಶರು, ತಿಪಟೂರು.**